RNU AIR DHARWAD

**SEPTEMBER 08,2024**
**ALL INDIA RADIO- DHARWAD**
**PRADESH SAMACHARA (KANNADA) 7:05 AM**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ವಿವೇಕಾದಿತ್ಯ ಕನಿಯಾಲ**

<><><>

**ಮುಖ್ಯಾಂಶಗಳು:**

- **ಮಹಾದಾಯಿ ನೀರು ಹಂಚಿಕೆ ವಿವಾದ;** ಕೇಂದ್ರ ಮಧ್ಯಸ್ಥಿಕೆ ವಹಿಸಿ ಶೀಘ್ರ ಬಗೆಹರಿಸಲಿ – ಡಿ.ಕೆ. ಶಿವಕುಮಾರ ಮನವಿ.
- **ಚಿಕ್ಕಬಳ್ಳಾಪುರದ 20 ಎಕರೆ ಭೂಮಿಯಲ್ಲಿ,** ಹೂವಿನ ಮಾರುಕಟ್ಟೆ ನಿರ್ಮಾಣ – ಎಂ.ಸಿ.ಸುಧಾಕರ್.
- **ಬಹುಭಾ ಾ ಶಿಕ್ಷಣವನ್ನು ಉತ್ತೇಜಿಸುವುದು;** ಪರಸ್ಪರ ತಿಳಿವಳಿಕೆ ಮತ್ತು ಶಾಂತಿಗಾಗಿ ಸಾಕ್ಷರತೆ ಧ್ಯೇಯದಡಿ ಇಂದು, ವಿಶ್ವ ಸಾಕ್ಷರತಾ ದಿನಾಚರಣೆ.
- **ನಾಡಿನೆಲ್ಲೆಡೆ ಗೌರಿ–ಗಣೇಶ ಹಬ್ಬದ ಸಂಭ್ರಮ;** ಗಣ್ಯರಿಂದ ನಾಡಿನ ಜನತೆಗೆ ಶುಭಾಶಯ.

<><><>

**ಈಗ ವಾರ್ತೆಗಳ ವಿವರ**

<><><>

**ಕಳಸಾ–ಬಂಡೂರಿ ನಾಲೆಗಳ ತಿರುವು ಯೋಜನೆ ಸಂಬಂಧಿತ,** ಮಹಾದಾಯಿ ನೀರು ಹಂಚಿಕೆ ವಿವಾದವನ್ನು, ಶೀಘ್ರ ಬಗೆಹರಿಸಿ, ಕಿತ್ತೂರು ಕರ್ನಾಟಕ ಭಾಗದ ಬೆಳಗಾವಿ, ಧಾರವಾಡ ಹಾಗೂ ಗದಗ ಜಿಲ್ಲೆಗಳ, ನೀರಿನ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು, ಕೇಂದ್ರ ಸರ್ಕಾರಕ್ಕೆ ಜಲ ಸಂಪನ್ಮೂಲ ಖಾತೆ ಸಚಿವ ಡಿ.ಕೆ. ಶಿವಕುಮಾರ ಮನವಿ ಮಾಡಿದ್ದಾರೆ.

ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮಹಾದಾಯಿ ನೀರು ಹಂಚಿಕೆ ಸಮಸ್ಯೆ ಪರಿಹಾರ ಸೂತ್ರ ಕಂಡುಕೊಳ್ಳಲು, ಮುಂಬರುವ 15 ದಿನದೊಳಗೆ ಸರ್ವಪಕ್ಷ ಸಭೆ ಕರೆಯಲಾಗುವುದು ಎಂದು, ತಿಳಿಸಿದರು.

ಎತ್ತಿನಹೊಳೆ ಯೋಜನೆ ಸಮರ್ಪಕ ಹಾಗೂ ಕಾಲಮಿತಿಯಲ್ಲಿ ಅನುಷ್ಠಾನಗೊಂಡು, ಕೋಲಾರ ಹಾಗೂ ಚಿಕ್ಕಬಳ್ಳಾಪುರ ಜನರ ಕುಡಿವ ನೀರಿನ ಬವಣೆ ನೀಗಿಸಲಿದೆ ಎಂದು, ಡಿ.ಕೆ. ಶಿವಕುಮಾರ ಹೇಳಿದರು.

<><><>

**ಮಹಾದಾಯಿ ಯೋಜನೆ,** ಕುಡಿಯುವ ನೀರು ಪೂರೈಸಲು ಉದ್ದೇಶಿತವಾಗಿದೆ. ಯೋಜನೆ ಕೂಡಲೇ ಅನುಷ್ಟಾನಗೊಳ್ಳಲು, ಎಲ್ಲ ಅಡೆತಡೆಗಳನ್ನು, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ನಿವಾರಿಸಿಕೊಡಬೇಕು ಎಂದು, ಸಚಿವ ಎಂ.ಬಿ.ಪಾಟೀಲ ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ ಆಗ್ರಹಿಸಿದ್ದಾರೆ.

<><><>

**ಕಾಲುವೆಗಳ ಮೂಲಕ, ಕೃಷಿ ಜಮೀನಿಗೆ** ಸಮರ್ಪಕವಾಗಿ ನೀರು ಒದಗಿಸಲು ಸೂಕ್ತ ಕ್ರಮ ಹಾಗೂ ನಿರ್ವಹಣೆಗೆ, ವಿದೇಶಿ ತಂತ್ರಜ್ಞಾನ ಅಳವಡಿಸಲು, ಯೋಜಿಸಲಾಗಿದೆ.

ಫ್ರಾನ್ಸ್ ದೇಶದ ನೀರಾವರಿ ತಜ್ಞ ಡಿ.ರೆನಾಲ್ಟ್ ಅವರು, ಯಾದಗಿರಿ ಜಿಲ್ಲೆಯ ಹುಣಸಗಿ ತಾಲೂಕಿನ ನಾರಾಯಣಪೂರ ಎಡದಂಡೆ ಕಾಲುವೆಯ, ಹಲವು ಉಪ ಕಾಲುವೆಗಳಿಗೆ ಭೇಟಿ ನೀಡಿ, ವಸ್ತುಸ್ಥಿತಿ ಅವಲೋಕಿಸಿದರು.

ಈಗಾಗಲೇ ನೂತನ ಸ್ಕಾಡಾ ತಂತ್ರಜ್ಞಾನ ಮೂಲಕ ಉಪ ಕಾಲುವೆಗಳಿಗೆ ನೀರು ಹರಿಸಿ, ರೈತರಿಗೆ ಸಮರ್ಪಕ ನೀರು ಒದಗಿಸುವಲ್ಲಿ, ನೀರಾವರಿ ಇಲಾಖೆ ಅಧಿಕಾರಿಗಳು ಯಶಸ್ಸು ಕಂಡಿದ್ದಾರೆ.

<><><>

**ಚಿಕ್ಕಬಳ್ಳಾಪುರ ತಾಲೂಕು** ನಂದಿ ಹೋಬಳಿಯ, ಯಲುವಳ್ಳಿ ಬಳಿಯ, ತೋಟಗಾರಿಕೆ ಇಲಾಖೆಗೆ ಸೇರಿದ, 20 ಎಕರೆ ಭೂಮಿಯಲ್ಲಿ, ಹೂವಿನ ಮಾರುಕಟ್ಟೆ ನಿರ್ಮಿಸಲು ರಾಜ್ಯ ಸರ್ಕಾರ ಮುಂದಾಗಿದೆ ಎಂದು, ಜಿಲ್ಲಾ ಉಸ್ತುವಾರಿ ಸಚಿವ ಎಂ.ಸಿ.ಸುಧಾಕರ್ ತಿಳಿಸಿದ್ದಾರೆ.

ರಾಜ್ಯದಲ್ಲಿಯೇ ಅತಿ ಹೆಚ್ಚು ಹಾಗೂ ವಿವಿಧ ರೀತಿಯ ಹೂವುಗಳನ್ನು ಬೆಳೆಯುವ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ, ಹೂವು ಬೆಳೆಗಾರರಿಗೆ ಅನುಕೂಲ ಕಲ್ಪಿಸಲು, ಜಿಲ್ಲಾ ಕೇಂದ್ರದಲ್ಲಿ ಹೂವಿನ ಮಾರುಕಟ್ಟೆ ಸ್ಥಾಪಿಸಲಾಗುತ್ತಿದೆ ಎಂದು ಮಾಹಿತಿ ನೀಡಿದ್ದಾರೆ.

ಹೂ, ಹಣ್ಣು ಮತ್ತು ತರಕಾರಿ ಜೊತೆ ಹೈನುಗಾರಿಕೆಯಲ್ಲೂ, ಚಿಕ್ಕಬಳ್ಳಾಪುರ ಖ್ಯಾತಿ ಗಳಿಸಿದೆ. ಜಿಲ್ಲೆಯಲ್ಲಿ ಬೆಳೆಯುವ ಸೇವಂತಿಗೆ, ಗುಲಾಬಿ, ಚೆಂಡು ಹೂವು ಮತ್ತು ವಿವಿಧ ಹಬ್ಬ, ಕಾರ್ಯಕ್ರಮಗಳಿಗೆ ಬೇಕಾಗುವ, ಬಣ್ಣ ಬಣ್ಣದ ಅಲಂಕಾರಿಕ ಹೂವುಗಳಿಗೆ, ಹೊರ ರಾಜ್ಯ ಮತ್ತು ವಿದೇಶಗಳಲ್ಲಿಯೂ ಹೆಚ್ಚಿನ ಬೇಡಿಕೆ ಇದೆ.

ಹೀಗಾಗಿ, ಚಿಕ್ಕಬಳ್ಳಾಪುರ ಜಿಲ್ಲೆಯ ಪುಷ್ಪೋದ್ಯಮಕ್ಕೆ ಮತ್ತ ್ಟ ಬಲ ತುಂಬಿ, ಉತ್ತೇಜಿಸುವ ದೃಷ್ಟಿಯಿಂದ, ಬೃಹತ್ ಹೂವಿನ ಮಾರುಕಟ್ಟೆ ನಿರ್ಮಿಸಲು ಉದ್ದೇಶಿಸಿ, ಚಿಕ್ಕಬಳ್ಳಾಪುರ ಎ.ಪಿ.ಎಂ.ಸಿ. ಕಾರ್ಯದರ್ಶಿ ಹೆಸರಿಗೆ ಜಮೀನನ್ನು ಮಂಜೂರು ಮಾಡಿದೆ.

<><><>

**ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಕರೆ ಕೊಟ್ಟ,** 'ಒಂದು ಗಿಡ – ತಾಯಿ ಹೆಸರಲ್ಲಿ' ಅಭಿಯಾನಕ್ಕೆ, ದೇಶಾದ್ಯಂತ ವ್ಯಾಪಕ ಪ್ರತಿಕ್ರಿಯೆ ವ್ಯಕ್ತವಾಗಿದೆ.

2024 ರ ವಿಶ್ವ ಪರಿಸರ ದಿನದಂದು ಪ್ರಾರಂಭಿಸಲಾದ ಈ ಅಭಿಯಾನದಲ್ಲಿ, ಇಲ್ಲಿಯ ವರೆಗೆ 52 ಕೋಟಿ ಗಿಡಗಳನ್ನು ನೆಡಲಾಗಿದೆ. ಪರಿಸರ ಸುಸ್ಥಿರತೆಯೆಡೆಗೆ ಮಹತ್ವದ ಮೈಲುಗಲ್ಲು ಎನಿಸಿದೆ.

<><><>

**ಗದಗ ಜಿಲ್ಲೆ ಲಕ್ಕುಂಡಿ ಗ್ರಾಮದ, ಕಿತ್ತೂರು ರಾಣಿ ಚನ್ನಮ್ಮ** ವಸತಿ ಶಾಲೆಯ ಆವರಣ, ಹಸಿರು ಹೊದ್ದು ಕಂಗೊಳಿಸುತ್ತಿದೆ. ಈ ಶಾಲೆಯ ಮಕ್ಕಳು, ದೈಹಿಕ ಶಿಕ್ಷಣ ಶಿಕ್ಷಕ ವೀರೇಶ ಕಮ್ಮಾರ ನೇತೃತ್ವದಲ್ಲಿ, ಹಸಿರು ಉಕ್ಕಿಸಿ, ಮಾದರಿಯಾಗಿದ್ದಾರೆ.

ದೈಹಿಕ ಶಿಕ್ಷಣ ಶಿಕ್ಷಕ ವೀರೇಶ ಕಮ್ಮಾರ, ಪ್ರದೇಶ ಸಮಾಚಾರಕ್ಕಾಗಿ ತಮ್ಮ ಸಂತಸ ಹಂಚಿಕೊಂಡಿದ್ದಾರೆ.

<><><>

**ದೈಹಿಕ ಶಿಕ್ಷಣ ಶಿಕ್ಷಕ ವೀರೇಶ ಕಮ್ಮಾರ ಧ್ವನಿ 46 ಸೆಕೆಂದುಗಳು**

<><><>

<><><>

**ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..**

<><><>

**ಇಂದು, ಅಂತಾರಾಷ್ಟ್ರೀಯ ಸಾಕ್ಷರತಾ ದಿನಾಚರಣೆ.**

'ಬಹುಭಾ ಾ ಶಿಕ್ಷಣವನ್ನು ಉತ್ತೇಜಿಸುವುದು: ಪರಸ್ಪರ ತಿಳಿವಳಿಕೆ ಮತ್ತು ಶಾಂತಿಗಾಗಿ ಸಾಕ್ಷರತೆ' ಎಂಬ ಧ್ಯೇಯದಡಿ, ಈ ಬಾರಿ ಸಾಕ್ಷರತಾ ದಿನವನ್ನು ಆಚರಿಸಲಾಗುತ್ತಿದೆ.

1967 ರಿಂದ, ಸಾಕ್ಷರತೆ ಪ್ರಮಾಣ ಹೆಚ್ಚಿಸಿ, ನ್ಯಾಯಯುತ, ಶಾಂತಿಯುತ ಮತ್ತು ಮಾನವ ಸಂಪನ್ಮೂಲದ ಸುಸ್ಥಿರ ಅಭಿವೃದ್ಧಿ ಸಾಧಿಸಲು, ಸಾಕ್ಷರತಾ ದಿನಾಚರಣೆ ಆಯೋಜಿಸಲಾಗುತ್ತದೆ.

ಸಾಕ್ಷರತೆ ಮೂಲಭೂತ ಮಾನವ ಹಕ್ಕು. ಇತರೆ ಮಾನವ ಹಕ್ಕುಗಳು, ಸ್ವಾತಂತ್ರ್ಯ ಮತ್ತು ಜಾಗತಿಕ ಪೌರತ್ವವನ್ನು ಆನಂದಿಸಲು ಇರುವ ಹೆಬ್ಬಾಗಿಲು.

ವಿಶ್ವಾದ್ಯಂತ 6 ರಿಂದ 18 ವ ್ಷ ವಯಸ್ಸಿನ, ಸುಮಾರು 250 ಮಿಲಿಯನ್ ಮಕ್ಕಳು ಶಾಲೆಯಿಂದ ಹೊರಗುಳಿದಿದ್ದಾರೆ. ಈ ಹಿನ್ನೆಲೆಯಲ್ಲಿ, ಸಮಾನತೆ ಮತ್ತು ತಾರತಮ್ಯ, ಕಾನೂನಿನ ನಿಯಮ, ಒಗ್ಗಟ್ಟು, ವೈವಿಧ್ಯತೆ ಮತ್ತು ಸಹಿ ್ಣತೆ, ಪರಸ್ಪರ ಗೌರವದ ಆಧಾರದ ಮೇಲೆ, ಜ್ಞಾನ, ಕೌಶಲ, ಮೌಲ್ಯಾದರ್ಶಗಳು ಹಾಗೂ ವರ್ತನೆ ಮತ್ತು ನಡವಳಿಕೆಗಳನ್ನು ಬಯಸುವ ನಾಗರಿಕ ಸಮಾಜದಲ್ಲಿ, ಸಾಕ್ಷರತೆ ಬದುಕಿನ ಅಡಿಪಾಯವಾಗಿದೆ.

ಇಂದು ರಾಜ್ಯದ ಹಲವೆಡೆ, ವಿಶೇಷ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ.

<><><>

**ನಾಡಿನೆಲ್ಲೆಡೆ ಗೌರಿ-ಗಣೇಶ ಹಬ್ಬದ ಸಂಭ್ರಮ ಮನೆಮಾಡಿದೆ.**

ನಾಡಿನ ಜನತೆಗೆ, ರಾಷ್ಟ್ರಪತಿ, ಉಪರಾಷ್ಟ್ರಪತಿ, ಪ್ರಧಾನಮಂತ್ರಿ ಹಾಗೂ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಸೇರಿದಂತೆ, ಅನೇಕ ಗಣ್ಯರು ಗಣೇಶ ಹಬ್ಬದ ಶುಭಾಶಯ ಕೋರಿದ್ದಾರೆ.

ವಿಘ್ನವಿನಾಶಕ, ಸಕಲ ವಿಘ್ನಗಳನ್ನು ಎದುರಿಸುವ ಆತ್ಮಬಲವನ್ನು ದಯಪಾಲಿಸಲಿ, ಹಬ್ಬದ ಸಡಗರ ಹಾಗೂ ಸಂಭ್ರಮ ಇಮ್ಮಡಿಯಾಗಲಿ. ಜೊತೆಗೆ ಪರಿಸರ ಕಾಳಜಿ ಮರೆಯದಿರಲಿ ಎಂದು, ಶುಭಾಶಯ ಸಂದೇಶಗಳಲ್ಲಿ ಅವರು ಕೋರಿದ್ದಾರೆ.

ಸಾರ್ವಜನಿಕ ಗಣೇಶೋತ್ಸವದ ಹಿನ್ನೆಲೆ, ರಾಜ್ಯಾದ್ಯಂತ ಬಿಗಿ ಭದ್ರತೆ ಕೈಗೊಳ್ಳಲಾಗಿದೆ. ಹುಬ್ಬಳ್ಳಿಯ ಈದ್ಗಾ ಮೈದಾನದಲ್ಲಿ ಪೊಲೀಸ್ ಬಂದೋಬಸ್ತ್ ವ್ಯಾಪಕವಾಗಿದೆ.

ಮನೆಗಳಲ್ಲಿ ಗಣೇಶ ಪ್ರಾಣ ಪ್ರತಿಷ್ಟಾಪನೆಗೊಂಡ ಹಿನ್ನೆಲೆ, ಮಾವಿನ ತಳಿರು–ತೋರಣ, ಹೂವು, ಬಾಳೆ ಕಂದುಗಳಿಂದ ಸಿಂಗರಿಸಿ, ಗಣೇಶನನ್ನು ಶ್ರದ್ಧಾ ಭಕ್ತಿಯಿಂದ ಬರಮಾಡಿಕೊಳ್ಳಲಾಯಿತು.

**ದೊಡ್ಡ ಬಳ್ಳಾಪುರದಲ್ಲಿ** ನೇಕಾರ ಸಮುದಾಯ ಸಗಣಿಯಲ್ಲಿ ಪಿಳ್ಳೆರಾಯನನ್ನು ಪ್ರತಿ ಷ್ಠಾಪಿಸಿ, ಮಗ್ಗಗಳಿಗೆ ಪೂಜೆ ಸಲ್ಲಿಸಿದರು.

**ಶಿವಮೊಗ್ಗ ಸೇರಿದಂತೆ ಹಲವೆಡೆ,** ಗಣಪತಿಯ ವಾಹನ ಮೂಷಿಕನನ್ನು ಮಾತ್ರ ಮನೆಗಳಲ್ಲಿ ಪ್ರತಿಷ್ಠಾಪಿಸಿ, ಪೂಜಿಸಲಾಯಿತು.

**ಹಾವೇರಿಯಲ್ಲಿ ಗಣೇಶ ಮೂರ್ತಿಗಳ ವಿಸರ್ಜನೆಗೆ,** ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, 'ಗಣೇಶ ಮೂರ್ತಿ ವಿಸರ್ಜನಾ ಸಂಚಾರಿ ವಾಹನ' ವ್ಯವಸ್ಥೆ ಮಾಡಿದೆ.

**ಬಳ್ಳಾರಿ ನಗರದ 450ಕ್ಕೂ ಹೆಚ್ಚು ಸ್ಥಳಗಳಲ್ಲಿ** ಗಣೇಶನ ವಿಗ್ರಹ ಪ್ರತಿ ಷ್ಠಾಪಿಸಿದ್ದು, ಐದು ದಿನಗಳ ಬಳಿಕ ವಿಸರ್ಜನೆ ನಡೆಯಲಿದೆ.

<><><>

**ಅಂತಾರಾಷ್ಟ್ರೀಯ ರಣಹದ್ದು ಜಾಗೃತಿ ದಿನವನ್ನು,** ಶನಿವಾರ ದೇಶಾದ್ಯಂತ ಆಚರಿಸಲಾಯಿತು.

ಪ್ರತಿ ವ ರ್ಷ ಸೆಪ್ಟೆಂಬರ್ ತಿಂಗಳ ಮೊದಲ ಶನಿವಾರ ಜಗತ್ತಿನಾದ್ಯಂತ ರಣಹದ್ದು ಜಾಗೃತಿ ದಿನ ಆಚರಿಸಲಾಗುತ್ತಿದ್ದು, ನಮ್ಮ ಪರಿಸರ ವ್ಯವಸ್ಥೆಯಲ್ಲಿ ರಣಹದ್ದುಗಳ ಪ್ರಾಮುಖ್ಯತೆ ಬಗ್ಗೆ ಜಾಗೃತಿ ಮೂಡಿಸುವುದು ಈ ದಿನಾಚರಣೆಯ ಉದ್ದೇಶ.

ಕರ್ನಾಟಕ, ತಮಿಳುನಾಡು, ಮತ್ತು ಕೇರಳ ರಾಜ್ಯಗಳಲ್ಲಿ, ಏಳು ಹುಲಿ ಸಂರಕ್ಷಿತ ಪ್ರದೇಶಗಳು ಮತ್ತು ಅರಣ್ಯ ಪ್ರದೇಶಗಳಲ್ಲಿ, ರಣಹದ್ದುಗಳ ಸಂಖ್ಯೆ, 2023ರ ಡಿಸೆಂಬರ್‌ನಲ್ಲಿ 308 ಕ್ಕೆ ಗಮನಾರ್ಹ ಏರಿಕೆ ಕಂಡಿದೆ. ರಣಹದ್ದುಗಳನ್ನು ರಕ್ಷಿಸುವ ಪ್ರಯತ್ನಕ್ಕೆ ದೊರಕಿದ ಯಶಸ್ಸಾಗಿದೆ.

ರಣಹದ್ದುಗಳನ್ನು ಕ್ರೂರ, ಕೊಳಕು ಪಕ್ಷಿಗಳೆಂದು ಕೆಟ್ಟದಾಗಿ ಬಿಂಬಿಸಲಾಗುತ್ತಿದೆ. ಆದರೆ, ರಣಹದ್ದುಗಳು ಉಚಿತವಾಗಿ ಪರಿಸರ ವ್ಯವಸ್ಥೆಗೆ ಪೂರಕ ಸೇವೆ ಒದಗಿಸುತ್ತವೆ. ಪೋ ಷಕಾಂಶಗಳ ಮರುಬಳಕೆ, ಮಣ್ಣು ಮತ್ತು ನೀರಿನ ಮಾಲಿನ್ಯ ತಡೆಗಟ್ಟಲು ಹಾಗೂ ರೋಗಗಳ ಹರಡುವಿಕೆಯನ್ನು ನಿಯಂತ್ರಿಸುವಲ್ಲಿ, ರಣಹದ್ದುಗಳು ನಿರ್ಣಾಯಕ ಪಾತ್ರವಹಿಸುತ್ತವೆ.

<><><>

**ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘದ** ಸಭಾಭವನದಲ್ಲಿ, ಇಂದು ಮತ್ತು ನಾಳೆ, ಅರಣ್ಯ ಮತ್ತು ಸುಸ್ಥಿರ ಅಭಿವೃದ್ಧಿ ಕುರಿತು, ಎರಡು ದಿನಗಳ ರಾಜ್ಯ ಮಟ್ಟದ ಚಿಂತನ–ಮಂಥನ ಸಮಾವೇಶ ಜರುಗಲಿದೆ ಎಂದು, ಸಂಘದ ಪ್ರಧಾನ ಕಾರ್ಯದರ್ಶಿ ಶಂಕರ ಹಲಗತ್ತಿ ಹಾಗೂ ಸಮಾವೇಶದ ಸಂಚಾಲಕ ಡಾಕ್ಟರ್ ಸಂಜೀವ ಕುಲಕರ್ಣಿ ತಿಳಿಸಿದ್ದಾರೆ.

ಸುದ್ದಿಗೋಷ್ಟಿಯಲ್ಲಿ ಮಾತನಾಡಿದ ಅವರು, ಶಿವಮೊಗ್ಗದ ಪಶ್ಚಿಮಘಟ್ಟ ಉಳಿಸಿ ಅಭಿಯಾನ, ಧಾರವಾಡ ಜಿಲ್ಲೆಯ ಪರಿಸರಕ್ಕಾಗಿ ನಾವು ಸಂಘಟನೆ ಸಹಯೋಗದಲ್ಲಿ, ಚಿಪ್ಕೋ ಹಾಗೂ ಅಪ್ಪಿಕೋ ಚಳವಳಿ ಸೇರಿದಂತೆ ಪರಿಸರ ವಿಷಯಗಳ ಬಗ್ಗೆ ತಜ್ಞರು ತಮ್ಮ ವಿಚಾರ ಮಂಡಿಸಲಿದ್ದಾರೆ ಎಂದರು.

<><><>

**ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಹಿನ್ನೆಲೆ,** ಇದೇ 15 ರಂದು, ಬಳ್ಳಾರಿ ಜಿಲ್ಲೆಯ ಸಂಡೂರು ತಾಲೂಕಿನ ಕುರೇಕುಪ್ಪ ದಿಂದ ಚಿತ್ರದುರ್ಗ ಜಿಲ್ಲೆಯ ಗಡಿ ಗ್ರಾಮ ಕೆಳಗಿನ ಕಣಿವೆ ವರೆಗೆ, 46 ಕಿಲೋ ಮೀಟರ್ ಮಾನವ ಸರಪಳಿ ರಚಿಸಿ, ಜನ ಜಾಗ್ರತಿ ಮೂಡಿಸಲಾಗುತ್ತಿದೆ.

ಅಂದು ಬೆಳಿಗ್ಗೆ 8 ರಿಂದ 9.30 ರ ವರೆಗೆ ಮಾನವ ಸರಪಳಿ ರಚಿಸಲಾಗುತ್ತಿದೆ.

ಪ್ರಜಾಪ್ರಭುತ್ವದ ಮೌಲ್ಯ, ಸಂವಿಧಾನದ ಆಶಯಗಳನ್ನು ಎತ್ತಿಹಿಡಿಯುವ, ಸಂವಿಧಾನದ ಗೌರವ, ಘನತೆ ಹೆಚ್ಚಿಸುವ ನಿಟ್ಟಿನಲ್ಲಿ, ಮಾನವ ಸರಪಳಿ ರಚಿಸಲು ಜಿಲ್ಲಾಡಳಿತ ಪೂರ್ವ ಸಿದ್ಧತೆ ಕೈಗೊಂಡಿದೆ.

<><><>

**ಮಂಡ್ಯ ಜಿಲ್ಲೆ ಮದ್ದೂರಿನ ನಿಡಘಟ್ಟ ಗ್ರಾಮದಿಂದ,** ಶ್ರೀರಂಗಪಟ್ಟಣದ ಸಿದ್ದಲಿಂಗಪುರದ ವರೆಗೆ, ಇದೇ 15ನೇ ತಾರೀಖು 62 ಕಿಲೋ ಮೀಟರ್ ವರೆಗೆ, ಮಾನವ ಸರಪಳಿ ನಿರ್ಮಿಸಿ, ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನ ಆಚರಿಸಲಾಗುತ್ತಿದೆ ಎಂದು, ಜಿಲ್ಲಾಧಿಕಾರಿ ಡಾಕ್ಟರ್ ಕುಮಾರ ಹೇಳಿದ್ದಾರೆ.

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

- **ಮಹಾದಾಯಿ ನೀರು ಹಂಚಿಕೆ ವಿವಾದ;** ಕೇಂದ್ರ ಮಧ್ಯಸ್ಥಿಕೆ ವಹಿಸಿ ಶೀಘ್ರ ಬಗೆಹರಿಸಲಿ – ಡಿ.ಕೆ. ಶಿವಕುಮಾರ ಮನವಿ.
- **ಚಿಕ್ಕಬಳ್ಳಾಪುರದ 20 ಎಕರೆ ಭೂಮಿಯಲ್ಲಿ,** ಹೂವಿನ ಮಾರುಕಟ್ಟೆ ನಿರ್ಮಾಣ – ಎಂ.ಸಿ.ಸುಧಾಕರ್.
- **ಬಹುಭಾ ಾ ಶಿಕ್ಷಣವನ್ನು ಉತ್ತೇಜಿಸುವುದು;** ಪರಸ್ಪರ ತಿಳಿವಳಿಕೆ ಮತ್ತು ಶಾಂತಿಗಾಗಿ ಸಾಕ್ಷರತೆ ಧ್ಯೇಯದಡಿ ಇಂದು, ವಿಶ್ವ ಸಾಕ್ಷರತಾ ದಿನಾಚರಣೆ.
- **ನಾಡಿನೆಲ್ಲೆಡೆ ಗೌರಿ–ಗಣೇಶ ಹಬ್ಬದ ಸಂಭ್ರಮ;** ಗಣ್ಯರಿಂದ ನಾಡಿನ ಜನತೆಗೆ ಶುಭಾಶಯ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>